# ಸಿಯುಕೆಯಲ್ಲಿ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಕಮ್ಮರೆಡ್ಡಿ ಪ್ರತಿಪಾದನೆ

# ದ್ವಿದಳ ಧಾನ್ಯಕ್ಕೆ ಪ್ರತ್ಯೇಕ ನೀತಿ ಅಗತ್ಯ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ತೊಗರಿ ಸೇರಿದಂತೆ ದ್ವಿದಳ ಧಾನ್ಯ ಬೆಳೆಯುವ ರೈತರ ಹಿತ ಕಾಪಾಡಲು "ರಾಷ್ಟಮಟ್ಟದಲ್ಲಿ ದ್ವಿದಳ ಧಾನ್ಯ ಬೆಳೆಗೆ ಪ್ರತ್ಯೇಕ ನೀತಿ" ರೂಪಿಸುವುದು ಅಗತ್ಯವಾಗಿದೆ ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರೆಡ್ಡಿ ಪ್ರತಿಪಾದಿಸಿದರು.

ಆಳಂದ ತಾಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಯುಕ್ತವಾಗಿ ರೈತರ ಆದಾಯ ಮತ್ತು ಕಲ್ಯಾಣಭಿವೃದ್ಧಿಗೆ ಅಗತ್ಯವಾದ ಗ್ರಾಮೀಣ ನೈರ್ಮಲ್ಯ, ಮೂಲಭೂತ ಸೌಕರ್ಯ ಮತ್ತು ಸಾಮಾಜಿಕ ವಿಚಾರಗಳ ಕುರಿತು ಶುಕ್ರವಾರದಿಂದ ಆರಂಭವಾದ ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿದರು.

100 ಲಕ್ಷ ಕ್ವಿಂಟಾಲ್ ತೊಗರಿ ರಾಜ್ಯದಲ್ಲಿ ಉತ್ಪಾದನೆಯಾದರೂ, ಕೇಂದ್ರ ಸರ್ಕಾರ ಕೇವಲ 26.5 ಲಕ್ಷ ಕ್ವಿಂಟಾಲ್ ಮಾತ್ರ ಖರೀದಿಸಿದೆ. ಹೊರದೇಶದಿಂದ 50 ಲಕ್ಷ ಕ್ವಿಂಟಾಲ್ ತೊಗರಿ ಉತ್ಪನ್ನ ಆಮದು ಮಾಡಿಕೊಂಡಿದೆ. ಕೆಎಂಎಫ್ ಮಾದರಿಯಲ್ಲಿ ಉತ್ಪಾದಕರ ಮಹಾಮಂಡಳ ಸ್ಥಾಪನೆಗೆ ಕೃಷಿ ಬೆಲೆ ಆಯೋಗ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಶೀಘ್ರ ಅಸ್ತಿತ್ವಕ್ಕೆ ಬರಬಹುದು ಎಂದರು.

ವಿಶ್ರಾಂತ ಕುಲಪತಿ ಡಾ.ಎಸ್.ಎ.ಪಾಟೀಲ ಉದ್ಘಾಟಿಸಿದರು. ಆಳಂದ ಶಾಸಕ ಅಧ್ಯಕ್ಷತೆ ವಹಿಸಿದ್ದರು. ಸಿಯುಕೆ ಕುಲಪತಿ ಡಾ.ಎಚ್. ಎಂ.ಮಹೇಶ್ವರಯ್ಯ, ಸಮ ಕುಲಪತಿ ಪ್ರೊ.ಜಿ.ಆರ್.ನಾಯಕ್, ರಾಯಚೂರು ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ಎಸ್.ಕೆ.ಮೇಟಿ, ಡಾ.ಬಸಪ್ಪ, ಕಲಬುರಗಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ರಾಜು ತೆಗ್ಗೆಳ್ಳಿ, ರೈತ ಪ್ರತಿನಿಧಿ ಗಿರಿಜಾಬಾಯಿ ಸೇರಿದಂತೆ ಕೋಲಾರ, ತುಮಕೂರು, ಚಿತ್ರದುರ್ಗ, ಬೆಳಗಾವಿ, ಹಾವೇರಿ, ರಾಯಚೂರು, ಮಂಗಳೂರು, ಅಪಾರ ರೈತರು ಭಾಗವಹಿಸಿದ್ದರು. ಪ್ರಾಧ್ಯಾಪಕ ಡಾ.ಚನ್ನವೀರ ಆರ್.ಎಂ. ಸ್ವಾಗತಿಸಿ ನಿರೂಪಿಸಿದರು. ರಾಯಚೂರು ಕೃಷಿ ವಿವಿ ಪ್ರಕಟಿಸಿರುವ 26 ಬೆಳೆಗಳ ವಸ್ತು ಸ್ಥಿತಿ ವಿಶ್ಲೇಷಣೆಯ ಕಿರುಹೊತ್ತಿಗೆ ಬಿಡುಗಡೆ ಮಾಡಲಾಯಿತು.



ಕಲಬುರಗಿಗೆ ಸಮೀಪದ ಕಡಗಂಚಿಯಲ್ಲಿರುವ ಸಿಯುಕೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರೆಡ್ಡಿ ಮಾತನಾಡಿದರು. ಮಹೇಶ್ವರಯ್ಯ ಮೊದಲಾದವರಿದ್ದರು.

## ವೈವಿಧ್ಯಮಯವಾದ ಕೃಷಿ ವ್ಯಾವಹಾರಿಕವಾಗಿ ಮಾಡಿ

ರೈತರು ವರ್ಷಕ್ಕೆ ಭೂಮಿಗೆ ಹಾಕುವ ಗೊಬ್ಬರ, ಬೀಜ ಇನ್ನಿತರ ಖರ್ಚು ಮತ್ತು ಆದಾಯ ಬಗ್ಗೆ ತಲೆ ಕೆಡಿಸಿಕೊಳ್ಳದ ಪರಿಣಾಮ ಸಾಲದ ಸೂಲಕ್ಕೆ ಸಿಲುಕುತ್ತಿದ್ದಾರೆ. ಅದನ್ನು ತಪ್ಪಿಸಲು ಮುಂದಾಲೋಚನೆ ಇಟ್ಟುಕೊಂಡು ಪ್ರತಿಯೊಂದಕ್ಕು ಲೆಕ್ಕವಿಡಿ, ಆಗ ಎಲ್ಲವೂ ಸರಿ ಹೋಗುತ್ತದೆ ಎಂದು ಕಾರ್ಯಾಗಾರ ಉದ್ಘಾಟಿಸಿದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಸ್.ಎ.ಪಾಟೀಲ ಸಲಹೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ







MANAGER FOR
PETROL PUMP
ager in leading petrol pump.
ANAGER
years & above. Retried Army officer/Retried
end the interview. The candidates should be
Hindi. Personal capable to handing 15 to 20
ord. Walk in interview along with CV/Certificate
03-2018 between 10.30 am to 5pm.
urther details contact
ce Petrol Pump
nabad Ring Road, Kalaburagi
Email: ashwin.iyer@ril.com



ಸಿಯುಕೆಯಲ್ಲಿ ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣ

# ದ್ವಿದಳ ಧಾನ್ಯಕ್ಕೆ ರಾಷ್ಟ್ರೀಯ ನೀತಿ ಅಗತ್ಯ: ಕಮ್ಮರಡಿ

**ವಿಕ ಸುದ್ದಿಲೋಕ** ಕಲಬುರಗಿ

ತೊಗರಿ ಸೇರಿದಂತೆ ದ್ವಿದಳ ದಾನ್ಯಗಳ ಬೆಳೆಯುವ ರೈತರ ಹಿತ ಕಾಪಾಡಲು ರಾಷ್ಟ್ರಮಟ್ಟ ದಲ್ಲಿ ದ್ವಿದಳ ಧಾನ್ಯ ಬೆಳೆಗೆ ಪ್ರತ್ಯೇಕ ನೀತಿ ಅಗತ್ಯ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್.ಪ್ರಕಾಶ ಕಮ್ಮರಡಿ ಅಭಿಪ್ರಾಯಪಟ್ಟರು.

ಆಳಂದ ತಾಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದಲ್ಲಿ, ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿಗೆ ಅಗತ್ಯವಾದ ಗ್ರಾಮೀಣ ನೈರ್ಮಲ್ಯ, ಮೂಲಭೂತ ಸೌಕರ್ಯ ಮತ್ತು ಸಾಮಾಜಿಕ ವಿಚಾರಗಳ' ಕುರಿತು ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಗಾರದಲ್ಲಿ ಮಾತನಾಡಿದರು.

ಈ ವರ್ಷ ಉತ್ತಮ ಮಳೆಯ ಪರಿಣಾಮ ರಾಜ್ಯದಲ್ಲಿ ಹೆಚ್ಚಿನ ಪ್ರೊಟೀನ್‌ಗಳಿಂದ ಕೂಡಿದ ತೊಗರಿ ಇಳುವರಿ ಹೆಚ್ಚು ಬಂದಿದ್ದರು, ಮಾರುಕಟ್ಟೆಯಲ್ಲಿ ತಕ್ಕಂತೆ ಬೆಲೆ ಸಿಗದ ಪರಿಣಾಮ ರೈತರು ಕಂಗಾಲಾಗಿದ್ದಾರೆ. 100 ಲಕ್ಷ ಕ್ವಿಂಟಾಲ್ ತೊಗರಿಯನ್ನು ರಾಜ್ಯ ಉತ್ಪಾದಿಸಿದರೂ ಕೇಂದ್ರ ಸರಕಾರ ಕೇವಲ 26.5 ಲಕ್ಷ ಕ್ವಿಂಟಾಲ್ ಮಾತ್ರ ಖರೀದಿಸಿ, ಹೊರದೇಶದಿಂದ 50 ಲಕ್ಷ ಕ್ವಿಂಟಾಲ್ ತೊಗರಿ ಉತ್ಪನ್ನ ಆಮದು ಮಾಡಿಕೊಂಡಿದ್ದು ಕೇಂದ್ರ ಸರ್ಕಾರದ ತಪ್ಪು ನಡೆ ಇದಾಗಿದೆ. ದ್ವಿದಳ ಧಾನ್ಯ ಖರೀದಿಗೆಂದೆ ಕೆ.ಎಂ.ಎಫ್. ಮಾದರಿಯಲ್ಲಿ ಉತ್ಪಾದಕರ ಮಹಾಮಂಡಳ ಸ್ಥಾಪನೆಗೆ ಕೃಷಿ ಬೆಲೆ ಆಯೋಗ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದೆ ಎಂದರು.



ಆಳಂದ ತಾಲೂಕಿನ ಕಡಗಂಚಿಯ ಸಿಯುಕೆಯಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ. ಎನ್. ಪ್ರಕಾಶ ಕಮ್ಮರಡಿ, ಕುಲಪತಿ ಪ್ರೊ . ಎಚ್ . ಎಂ. ಮಹೇಶ್ವರಯ್ಯ ಉದ್ಘಾಟಿಸಿದರು. ಶಾಸಕ ಬಿ. ಆರ್. ಪಾಟೀಲ್ ಇತರರು ಇದ್ದರು.

## ಕಲಬುರಗಿ ರೈತರಲ್ಲಿ ಆಲಸಿತನ ಹೆಚ್ಚು

ಕಾರ್ಯಾಗಾರ ಉದ್ಘಾಟಿಸಿದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಸ್.ಎ.ಪಾಟೀಲ ಮಾತನಾಡಿ, ಕಲಬುರಗಿಯ ರೈತರು ವಾರ್ಷಿಕವಾಗಿ ಭೂಮಿಗೆ ಗೊಬ್ಬರ, ಬೀಜ ಇತರ ಖರ್ಚು ಮತ್ತು ಆದಾಯ ಬಗ್ಗೆ ತಲೆ ಕೆಡಿಸಿಕೊಳ್ಳದ ಪರಿಣಾಮ ಸಾಲದ ಸೂಲದಲ್ಲಿದ್ದು ಮುಂದಾಲೋಚನೆ ಇಟ್ಟುಕೊಂಡು ಪ್ರತಿಯೊಂದಕ್ಕು ಲೆಕ್ಕವಿಡಿ ಎಂದರು.

ಇಲ್ಲಿನ ರೈತರಲ್ಲಿ ಆಲಸ್ಯತನ ಹೆಚ್ಚಿದ್ದು, ಬೆವರು ಸುರಿಸಿ ದುಡಿಯಬೇಕೆಂಬ ಮನಸ್ಸು ಪರಿವರ್ತನೆ ಆಗಬೇಕಾಗಿರುವುದು ಮುಖ್ಯವಾಗಿದೆ. ಒಣಭೂಮಿ ಹೊಂದಿರುವ ಕಲಬುರಗಿಯಲ್ಲಿ ನೀರು ಮತ್ತು ಮಣ್ಣು ಹರಿದು ಹೋಗದಂತೆ ಭೂಮಿಯ ಫಲವತ್ತತೆ ಕಾಯ್ದುಕೊಳ್ಳಲು 3 ಮೀ. ಅಗಲದ ಹೊಡ್ಡು ಹಾಕಿಕೊಂಡು ಅದರ ಮೇಲೆ ಹೂವು, ಔಡಲು ಗಿಡಗಳನ್ನು ನೆಡಬಹುದಾಗಿದೆ. ಪ್ರತಿ ಬಾರಿ ತೊಗರಿ, ಹತ್ತಿ, ಹೆಸರು ಎನ್ನದೆ ಮಣ್ಣಿನ ಗುಣಧರ್ಮ ಅರಿತು ಮಾರುಕಟ್ಟೆಯಲ್ಲಿ ಯಾವ ಬೆಳೆಗೆ ಉತ್ತಮ ಬೆಲೆ ಇದಿಯೋ ಅದನ್ನು ಬೆಳೆದು ಒಟ್ಟಾರೆ ವೈವಿಧ್ಯಮಯ ಒಕ್ಕಲುತನವನ್ನು ವ್ಯವಹಾರಿಕವಾಗಿ ಮಾಡಿ ಆರ್ಥಿಕ ಪ್ರಗತಿ ಹೊಂದಿ ಎಂದು ಸಲಹೆ ನೀಡಿದರು.

## ತೊಗರಿಗಾಗಿ ಪಕ್ಷಭೇದ ಮರೆತು ಒತ್ತಡ ಅಗತ್ಯ

ಶಾಸಕ ಬಿ.ಆರ್.ಪಾಟೀಲ ಮಾತನಾಡಿ, ಜಿಲ್ಲೆಯಲ್ಲಿ ತೊಗರಿ ಉತ್ಪನ್ನ ಹೆಚ್ಚಿರುವುದರಿಂದ ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿಗೆ ನಿಗದಿಪಡಿಸಿರುವ ಮಿತಿ ಹೆಚ್ಚಳಕ್ಕೆ ಕೇಂದ್ರ ಸರ್ಕಾರಕ್ಕೆ ಪಕ್ಷಭೇದ ಮರೆತು ಜನಪ್ರತಿನಿಧಿಗಳು ಒತ್ತಡ ಹಾಕಬೇಕು. ಮದುವೆ-ಮುಂಜಿಗೆ ಲೆಕ್ಕ ಇಡುವ ರೈತರು ಆರ್ಥಿಕವಾಗಿ ಲಾಭ ತಂದುಕೊಡಬಹುದಾದ ಬೆಳೆಗಳ ಬಗ್ಗೆ ಲೆಕ್ಕ ಇಟ್ಟುಕೊಳ್ಳದಿರುವುದು ದುರದೃಷ್ಟಕರ. ಜಮೀನಿನ ಬದಲಾಗಿ ಇತ್ತೀಚೆಗೆ ಹೋಟೆಲ್ ಮತ್ತು ಢಾಬಾಗಳು ರೈತರ ಅಡ್ಡಾಗಳಾಗುತ್ತಿವೆ ಎಂದು ವಿಷಾದಿಸಿದರು. ಆಯೋಗ ರೈತರ ಸಮಗ್ರ ಕಲ್ಯಾಣ ಮತ್ತು ಆದಾಯ ವೃದ್ಧಿಸಲು ತೆಲ್ಲೂರ ಗ್ರಾಮವನ್ನು ಆಯ್ಕೆ ಮಡಿಕೊಂಡಿರುವುದು ಸಂತಸ, ತೆಲ್ಲೂರ ಗ್ರಾಮದಿಂದ ಈ ನಿಟ್ಟಿನಲ್ಲಿ ಉತ್ತಮ ಫಲಿತಾಂಶ ಹೊರಹೊಮ್ಮಲಿ ಎಂದು ಆಶಿಸಿದರು.

ರಾಜ್ಯದಲ್ಲಿ ರೈತ ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ನೀಡಿ ಆದಾಯ ವೃದ್ಧಿಸಲು, ರೈತ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ಆರೋಗ್ಯ ಮತ್ತು ಸಾಮಾಜಿಕ ಜೀವನ ಸುಧಾರಿಸುವುದಲ್ಲದೆ ಹಳ್ಳಿಗಳಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳುವುದರ ಜೊತೆಗೆ ಒಟ್ಟಾರೆ ರೈತ ಸಮುದಾಯದ ಅಭಿವೃದ್ಧಿಗೆ ಪೂರಕವಾಗಿ ಬೇಕಾಗಿರುವ ಮೂಲಸೌಕರ್ಯಗಳ ಬಗ್ಗೆ ಬೆಳಕು ಚೆಲ್ಲಲು ಕೃಷಿ ಬೆಲೆ ಆಯೋಗವು ರಾಜ್ಯದ ವಿವಿಧ ಭಾಗದ 8 ಜಿಲ್ಲೆಗಳ ಎಂಟು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ನಡೆಸಿದೆ. ಅಧ್ಯಯನದಲ್ಲಿ ಭಾಗವಹಿಸಿದ ರೈತರ ಪೈಕಿ ಶೇ.90ರಷ್ಟು ಯುವ ರೈತರು ತಮ್ಮ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಿದಲ್ಲಿ ಕೃಷಿ ವೃತ್ತಿಯಲ್ಲಿ ಮುಂದುವರೆಯಲು ಇಚ್ಛೆ ವ್ಯಕ್ತಪಡಿಸಿದ್ದಾರೆ ಎಂದರು.

ಉಳುಮೆ ಮಾಡುವನ ಬದುಕು ಹಸನಾಗಿಸಲು ರೈತನ ಸಮಗ್ರ ಕಲ್ಯಾಣಕ್ಕೆ ಅಧ್ಯಯನ ವರದಿಯನ್ನು ಸರ್ಕಾರದ ಮುಂದಿಟ್ಟು ಸಮಸ್ಯೆ ಪರಿಹಾರಕ್ಕಾಗಿ ಆಯೋಗ ಕ್ರಮ ವಹಿಸಲಿದೆ ಎಂದ ಅವರು, ರೈತರು ಕೇವಲ ಒಂದೇ ಬೆಳೆಗೆ ಅಂಟಿಕೊಳ್ಳದೆ ಪ್ರಕೃತಿ ಮುನಿಸಿಕೊಂಡಾಗ ಹತಾಶೆಗೆ ಒಳಗಾಗದೆ ಧೈರ್ಯದಿಂದ ಜೀವನ ಸಾಗಿಸಬೇಕು ಎಂದು ಆತ್ಮವಿಶ್ವಾಸದ ಮಾತುಗಳನ್ನಾಡಿದರು. ಕೃಷಿ ಬೆಲೆ ಆಯೋಗದ ಪ್ರಾಯೋಜಕತ್ವದಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯವು ಹೊರತಂದಿರುವ ವಿವಿಧ 26 ಬೆಳೆಗಳ ವಸ್ತು ಸ್ಥಿತಿ ವಿಶ್ಲೇಷಣೆಯ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು.

ಅಧ್ಯಕ್ಷತೆಯನ್ನು ಸಿಯುಕೆ ಕುಲಪತಿ ಡಾ.ಹೆಚ್.ಎಂ.ಮಹೇಶ್ವರಯ್ಯ ವಹಿಸಿದ್ದರು. ವಿಶ್ವವಿದ್ಯಾಲಯದ ಸಮ ಕುಲಪತಿ ಪ್ರೊ.ಜಿ.ಆರ್.ನಾಯಕ್, ರಾಯಚೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ.ಎಸ್.ಕೆ.ಮೇಟಿ, ಡಾ.ಬಸಪ್ಪ ಕಲಬುರಗಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ರಾಜು ತೆಗ್ಗೆಳ್ಳಿ, ರೈತ ಪ್ರತಿನಿಧಿ ಗಿರಿಜಾಬಾಯಿ ಸೇರಿದಂತೆ ಕೋಲಾರ, ತುಮಕೂರು, ಚಿತ್ರದುರ್ಗ, ಬೆಳಗಾವಿ, ಹಾವೇರಿ, ರಾಯಚೂರು, ಮಂಗಳೂರು ಮತ್ತು ಕಲಬುರಗಿ ಜಿಲ್ಲೆಯ ನೂರಾರು ಸಂಖ್ಯೆಯ ರೈತರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಸಿ.ಯು.ಕೆ. ಸಾಮಾಜಿಕ ಕಾರ್ಯ ಇಲಾಖೆಯ ಮುಖ್ಯಸ್ಥ ಡಾ. ಚೆನ್ನವೀರ ಆರ್.ಎಂ. ಸ್ವಾಗತಿಸಿ ನಿರೂಪಿಸಿದರು.